# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.

## CC No. 1383/2023

CW- 1 PW-1

| | | |
|---|---|---|
| ಸಾಕ್ಷಿದಾರರ ಹೆಸರು | : | ಎಸ್. ವಿರುಪಾಕ್ಷಪ್ಪ |
| ತಂದೆ ಹೆಸರು | : | ಶರಣಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಸರಕಾರಿ ನೌಕರ |
| ವಾಸ ಸ್ಥಳ | : | ಅರೋಲಿ |

ದಿನಾಂಕ 02.06.2026 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-2,3 ರವರ ಪರಿಚಯ ಇರುತ್ತದೆ, ಚಾಸಾ-4 ನನ್ನ ಅಣ್ಣನ ಮಗ, ಚಾಸಾ-5 ಅಕ್ಕನ ಮಗ, ಚಾಸಾ-6 ರಿಂದ 8 ರವರು ನಮ್ಮ ಊರಿನವರು ಇರುತ್ತಾರೆ. ಆರೋಪಿತರ ಪರಿಚಯ ಇರುತ್ತದೆ. ದಿನಾಂಕ 04-07-2023 ರಂದು ಸಂಜೆ 4.30 ಗಂಟೆಗೆ ಅರೋಲಿ ಗ್ರಾಮದ ನಮ್ಮ ಹೊಲದಲ್ಲಿ ಇದ್ದಾಗ ಆರೋಪಿತರು ಸಡನ್ನಾಗಿ ಹೊಲದಲ್ಲಿ ಬಂದು ನನಗೆ ಅವಾಚ್ಯವಾಗಿ ಸೂಳೆ ಮಗನೇ ಅಂತ ಅವಾಚ್ಯವಾಗಿ ಬೈದಿರುತ್ತಾರೆ. ಎಲ್ಲರೂ ಸೇರಿ ಹೊಡೆಯಲು ಬಂದಿರುತ್ತಾರೆ. ನನ್ನನ್ನು ಕೆಳಗೆ ಕೆಡವಿ ನನಗೆ ಹೊಡೆಯಲು ಬಂದು ಸಾಯಿಸಿ ಬಿಡಿರಿ ಅಂತ ಅನ್ನುತ್ತಿದ್ದರು. ನಾನು ಕೆಳಗೆ ಬಿದ್ದಾಗ ಅಕ್ಕಪಕ್ಕದ ಹೊಲದವರು ನನಗೆ ಮೇಲೆ ಎಬ್ಬಿಸಿರುತ್ತಾರೆ, ನನಗೆ ಹೃದಯ ಕಾಯಿಲೆ ಆಗಿರುವುದರಿಂದ ಎದೆ ನೋವು ಆಗಿರುತ್ತದೆ. ನಂತರ ನಾವು ದೂರು ಕೊಡಲು ಹೋಗಿ ಪೊಲೀಸ ಠಾಣೆಯಲ್ಲಿ ದೂರು ನೀಡಿರುರುತ್ತದೆ. ಸದರಿ ಫಿರ್ಯಾದಿ ಈಗ ನೋಡುತ್ತಿದ್ದು ಅದನ್ನು ಈಗ ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸ್ದಿರಿಂದ ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಾರನೆ ದಿನ ಪೊಲೀಸರು ಅರೋಲಿ ಗ್ರಾಮದ ಹೊಲಕ್ಕೆ ಬಂದು ಚಾಸಾ-2, 3 ರವರ ಸಮಕ್ಷಮ ಸರ್ವೆ ನಂ. 196/2 ರಲ್ಲಿ ನಾನು ತೋರಿಸಿದ ಜಾಗೆಯಲ್ಲಿ ಪೊಲೀಸರು ಬೆಳಿಗ್ಗ 10 ರಿಂದ 10.30 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗ ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸ್ದಿರಿಂದ ಅದನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿರುತ್ತಾರೆ. ಅಂತೆಯೇ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ಆ ದಿನ ಆರೋಪಿತು ಎಲ್ಲ ರೂ ಸೇರಿ ನನಗ ಕೈಗಳಿಂದ ಹೊಡೆಬಡೆ ಮಾಡಿರುತ್ತಾರೆ ಎಂದರೆ ಸರಿ, ನನ್ನ ಮೈ ಮೇಲೆ ಅಂಗಿ ಹಿಡಿದು ಹೊಡೆದರುತ್ತಾರೆ ಎಂದರೆ ಸರಿ , ಸದರಿ ಹೊಲದಲ್ಲಿರುವ ಕಲ್ಲುಗಳನ್ನು ಕಿತ್ತಿರುತ್ತಾರೆ ಎಂದರೆ ಸರಿ , ಎಲ್ಲರೂ ಸೇರಿ ಜೀವ ೆಬದರಿಕೆ ಹಾಕಿರುತ್ತಾರೆ ಎಂದರೆ ಸರಿ , ನ್ಯಾಯಾಲಯದ ಮುಂದಿರುವ ಆರೋಪಿತರೇ ಹೋಡೆದರುತ್ತಾರೆ ಎಂದರೆ ಸರಿ .

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಎಂ. ವಕೀಲರಿಂದಃ**

ನಾನು ನಿವೃತ್ತನಾಗಿ 5 ವರ್ಷಗಳಾಗಿರುತ್ತದೆ. ನಾನು ಬಳ್ಳಾರಿಯಲ್ಲಿ ನಮ್ಮ ಕುಟುಂಬ ಸವೇತ ವಾಸವಾಗಿದ್ದೆನು ನಾನು ನಿವೃತ್ತದವರೆಗೆ ಅಲ್ಲೆ ಇದ್ದೆನು ಎಂದರೆ ಸರಿ, ಈಗಾಲೂ ಕೂಡ ನಾನು

ಬಳ್ಳಾರಿಯಲ್ಲ್ ವಾಸ ವಾಗಿದ್ದೇನೆ ಎಂದರೆ ಸರಿ. ಸರ್ವೆ ನಂ. 196/2 ಇದರ ಒಟ್ಟು 5 ಎಕರೆ 4 ಗುಂಟೆ ಇರುತ್ತದೆ. ನನಗೆ ಸೇರಿದ ಜಮೀನು ವಿಸ್ತೀರ್ಣ 02 ಎಕರೆ 11 ಗುಂಟೆ ಇರುತ್ತದೆ. ಸದರಿ ಸರ್ವ ನಂ. ದಲ್ಲಿ ಆರೋಪಿ-1 ರವರ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ಹೆಸರು ತಪ್ಪಾಗಿ ನಮೂದಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಊರಿನಲ್ಲಿ ನನ್ನ ಜಮೀನ ಪಕ್ಕದಲ್ಲಿ ಅರೋಪಿತರ ಜಮೀನು ಇದ್ದು ಸಾಗುವಳಿ ಮಾಡುತ್ತಿದ್ದಾರೆ ಎಂದು ಬರೆಸಿರುತೇನೆ ಎಂದರೆ ಸಾಕ್ಷಿಯು ಆ ಜಮೀನು ಬೇರೆಯವರಿಗೆ ಸೇರಿದ್ದು ಇರುತ್ತದೆ ಅದನ್ನು ಅರೋಪಿ-1 ಸಾಗುವಳಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆರೋಪಿ-1 ರವರ ಸಾಗುವಳಿ ಮಾಡುವ ಜಮೀನು ಇದೇ ಸರ್ವೆ ನಂಬರನಲ್ಲಿ 196/2 ರಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಆರೋಪಿ-1 ರವರ ತಂದೆಯು196/1 ರಲ್ಲಿ 2 ಎಕರೆ 11 ಗುಂಟೆಯನ್ನು ಖರೀದಿಸಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ಅದು ತಪ್ಪು ರಜಿಸ್ಟ್ರೇಷನ ಆಗಿದೆ ಎಂದು ನುಡಿಯುತ್ತಾರೆ. ಸದರಿ ತಪ್ಪಾಗಿ ರಜಿಸ್ಟ್ರೇಷನ ಆದ ಬಗ್ಗೆ ನಾನು ತಕರಾರು ಸಲ್ಲಿಸಿರುತ್ತೇನೆ. ಸದರಿ ತಕರಾರಿನ ಕುರಿತು ಪೊಲೀಸರಿಗೆ ತನಿಖಾ ಕಾಲಕ್ಕೆ ದಾಖಲೆ ನೀಡಿರುವುದಿಲ್ಲ. ಸರ್ವೆ ನಂ. 196/2 ರಲ್ಲಿರುವ 2 ಎಕರೆ 11 ಗುಂಟೆಯನ್ನು ನಾವೇ ಖುದ್ದಗಿ 1982 ರಿಂದ ಸಾಗುವಳಿ ಮಾಡುತ್ತಾ ಬಂದಿರುತ್ತೇವೆ. ಇದೇ ಸರ್ವೆ ನಂಬರಗೆ ಸಂಬಂಧಪಟ್ಟ ಹಾಗೆ ಒಎಸ ನಂ. 47/2014 ನೇದ್ದನ್ನು ಇದೇ ನ್ಯಾಯಾಲಯದಲ್ಲಿ ಆರೋಪಿ-1 ರವರ ಮೇಲೆ ಬಸ್ಸಮ್ಮ ರವರು ಮೂಲ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ದಿ. 26-10-2017 ರಂದು ದಾವೆ ಸುಳ್ಳಿನಿಂದ ಕೂಡಿದೆ ಎಂದು ವಜಾ ಆಗಿದೆ ಎಂದರೆ ಸಾಕ್ಷಿಯು ವಜಾ ಆಗಿದ್ದ ವಿಷಯ ಮಾತ್ರ ಗೊತ್ತಿದೆ ಎಂದು ನುಡಿಯತ್ತಾರೆ ಅದಕ್ಕೆ ನಮಗೆ ಸಂಬಂದ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಕೂಡ ಈ ನ್ಯಾಯಾಲಯದ ಮುಂದಿರುವ ಆರೋಪಿತರ 39/2024 ರಂತೆ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಅದು ಕೂಡ ಇದೇ ನ್ಯಾಯಾಲಯದಲ್ಲಿ ಸಾಕ್ಷಿಗಾಗಿ ಇರುತ್ತದೆ ಎಂದರೆ ಸರಿ. ಸದರಿ ಘನೆಯು 4-07-2023 ರಂದ ಸಂಜೆ 4.00 ಗಂಟೆಗೆ ಆಗಿರುತ್ತದೆ. ಸದರಿ ಘಟನಾ ಸ್ಥಳದಲ್ಲಿ ಚಾಸಾ-4 ರಿಂದ 8 ರವರು ಹಾಜರಿದ್ದರು. ಘಟನ ಸ್ಥಳದ ಪೂರ್ವಕ್ಕೆ ನಮ್ಮ ಹೊಲ, ಪಶ್ಚಿಮಕ್ಕೆ ನಬಿಸಾಬ ರವರ ಹೊಲ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಬೇಗಂ ರವರ ಜಮೀನು ಇರುತ್ತದೆ. ಆರೋಲಿ ಇಂದ ಮಾನವಿಗೆ 20 ಕಿ.ಮಿ ಅಂತರ ಇರುತ್ತದೆ. ಆರೋಲಿ ಇಂದ ಮಾನವಿಗೆ ಬರಲು ಅರ್ಧ ಗಂಟೆ ಬೇಕಾಗುತ್ತದೆ , ಆರೋಲಿ ಇಂದ ಮಾನವಿಗೆ ಬಹಳಷ್ಟು ಬಸ್ಸಿನ ಸೌಕರ್ಯ ಇದೆ ಎಂದರೆ ಸರಿ. ಆ ದಿನ ನಾನು ಚಿಕಿತ್ಸೆ ಪಡೆದಿರುವುದಿಲ್ಲ ನಾನು ನನ್ನ ಹತ್ತಿರ ಇರುವ ಗುಳಿಗೆ ನುಂಗಿರುತ್ತೇನೆ. ಸದರಿ ಘಟನೆ ನಡೆದ ದಿನ ಸಂಜೆ 5.00 ಗಂಟೆ ಪೊಲೀಸ ಠಾಣೆಗೆ ಬಂದು ದೂರು ನೀಡಿರುತ್ತೇನೆ. ಸದರಿ ಜಮೀನಿನ ಹದ್ದು ಬಸ್ತು ಮಡಿದ ಬಗ್ಗೆ ದಾಖಲಾತಿಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ, ಹದ್ದು ಬಸ್ತು ಯಾವ ತಾರೀಖಿನಂದು ಮಾಡಿದ್ದೇನೆಂದು ಈಗ ನನಗೆ ನೆನಪಿರುವುದಿಲ್ಲ. ಅ ರೀತಿಯಾಗಿ ನಾನು ಹದ್ದುಬಸ್ತು ಮಾಡಿರುವುದಿಲ್ಲ, ಯಾವುದೇ ಕಲ್ಲುಗಳನ್ನು ನೆಟ್ಟಿರುವುದಿಲ್ಲ, ಆ ರೀತಿ ಯಾವುದೇ ಘಟನೆ ನಡೆದಿರುವುದಿಲ್ಲ, ಈ ಹಳೆ ವೈಶಮ್ಯ ದಿಂದ ನಮ್ಮ ಅವರ ನಡುವೆ ವ್ಯಾಜ್ಯ ಇರುವುದರಿಂದ ಸುಳ್ಳುಪ್ರಕರಣದ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ, ಚಾಸಾ-2

ರಿಂದ 5 ರವರು ನಮಗೆ ಬೇಕಾರು ಮತ್ತು ಪರಿಚಯ ಇರುವುದರಿಂದ ನಮ್ಮ ಮಾತು ಕೇಳುತ್ತಾರೆ ಎಂಬ ಉದ್ದೇಶದಿಂದ ಇವರನ್ನು ಹೊರತು ಪಡಿಸಿ ಬೇರೆಯವರನ್ನು ಸಾಕ್ಷಿದಾರರನಾನಗಿ ಮಾಡಿಲ್ಲ ಎಂದರೆ ಸರಿಯಲ್ಲ. ದೂರು ನೀಡಿದ ನಂತರ ನಾನು ಪೊಲಿಸ್ ಠಾಣೆ ಮತ್ತೆ ಹೋಗಿರುವುದಿಲ್ಲ.

ಪೊಲೀಸ ಠ-ಣೆಗೆ ದೂರು ಕೊಟ್ಟ ನಂತರ ನಾನು ಯಾವುದೇ ಮರು ಹೇಳಿಕೆ ನೀಡಿಲ್ಲ ಎಂದರೆ ಸಾಕ್ಷಿಯು ಫಿರ್ಯಾದ ನೀಡುವ ಕಾಲಕ್ಕೆ ನೀಡಿದ್ದೇನೆಂದು ನುಡಿಯತ್ತಾರೆ.  ಸದರಿ ಸರ್ವೆ ನಂ. 196/2 ರನ್ನು ನಾನೇ ಊಳಿಮೆ ಮಾಡುತ್ತಾ ಇದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಕಬ್ಜಾ ವಹಿವಹಿನಲ್ಲಿ ಇಲ್ಲ ಎಂದರೆ ಸರಿಯಲ್ಲ,  ನಾನು ಆರೋಪಿಪತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಫಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>.

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

ಪ್ರ.ದ.ನ್ಯಾ.ದಂ.ಗಳು, ಮಾನ್ವಿ